ಕರ್ನಾಟಕ ವಿಧಾನ ಸಭೆ
ಶನಿವಾರ 29ನೇ ಮಾರ್ಚ್ 2003ರಂದು
ಸದನವು ವಿಧಾನಸೌಧದಲ್ಲಿರುವ ಸಭಾಂಗಣದಲ್ಲಿ
ಬೆಳಿಗ್ಗೆ 10-40 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)
ಪೀಠವನ್ನು ಅಲಂಕರಿಸಿದ್ದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ. ವಿಷಯ:- ಖಾಸಗಿ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ

ಅಧ್ಯಕ್ಷರು :- ವಿಧಾನ ಪರಿಷತ್‌ನಲ್ಲಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ರಿಪ್ಲೈ ಕೊಡುತ್ತಿದ್ದಾರೆ, ಯಾರಾದರೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು ಮಂಡಿಸುವುದು.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಖಾಸಗಿ ವಿಧೇಯಕವನ್ನು ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಮಂಡಿಸಿದ್ದೆವು, ಅದನ್ನು ತಾವು ತರಲೇ ಇಲ್ಲ, ಅಧಿವೇಶನದಲ್ಲೂ ಆಗದಿದ್ದರೆ ಮುಂದೆ ಹೋಗುತ್ತದೆ, ಕಳೆದ ಅಧಿವೇಶನದಲ್ಲಿ ಮುಂದಿನ ಅಧಿವೇಶನದಲ್ಲಿ ಇದನ್ನು ಮಾಡೋಣವೆಂದು ಹೇಳಿದ್ದೀರಿ, ಕೆ.ಬಿ. ಮಲ್ಲಿಕಾರ್ಜುನ ಮತ್ತು ನಾನು ಸೇರಿ ತಂದಿದ್ದೇವೆ.

ಅಧ್ಯಕ್ಷರು :- ಪ್ರತಿ ಶುಕ್ರವಾರ ಖಾಸಗಿ ವಿಧೇಯಕ ಬರುತ್ತದೆ, ಬೇರೆ ವಿಚಾರಗಳನ್ನು ಮಾತನಾಡುವುದರಲ್ಲೇ ಹೋಗುತ್ತಿದೆ, ಮತ್ತೆ ಜೂನ್-ಜುಲೈನಲ್ಲಿ ಸೇರುತ್ತಿದ್ದೇವಲ್ಲಾ.

ಶ್ರೀ ಎಸ್.ಎಸ್. ಪಾಟೀಲ್ :- ಅಷ್ಟರೊಳಗಾಗಿ ಯಾವ ಉದ್ದೇಶಕ್ಕಾಗಿ ಅದನ್ನು ಮಂಡಿಸಿದ್ದೇವೆ ಆ ಉದ್ದೇಶವೇ ಈಡೇರುವುದಿಲ್ಲ.

ಅಧ್ಯಕ್ಷರು :- ಖಾಸಗಿ ವಿಧೇಯಕ ಬಂದಾಗ ಬೇರೆ ವಿಷಯ ಮುಖ್ಯವಾದುದು ಎಂದು ಆ ಕಡೆ ಹೋಗುತ್ತಾರೆ, ಇವತ್ತು ಶುಕ್ರವಾರ ಅದನ್ನು ತೆಗೆದುಕೊಳ್ಳಬೇಕೆನ್ನುವ ವಿಚಾರ ಕೂಡ ಇರುವುದಿಲ್ಲ, ನಾವೇನು ಮಾಡೋಣ ಹೇಳಿ? ಮುಂದಿನ ಸದನದಲ್ಲಿ ತೆಗೆದುಕೊಳ್ಳೋಣ.

ಆ) ಕನ್ನಡದಲ್ಲಿ ಕಾಯಿದೆಯನ್ನು ಮುದ್ರಿಸುವ ಬಗ್ಗೆ

†ಶ್ರೀ ಎಸ್.ಎಸ್. ಪಾಟೀಲ್ :- ಮತ್ತೊಂದು ವಿಚಾರ, ನಮ್ಮ ಮಾರುಕಟ್ಟೆ ಮಂತ್ರಿಗಳು ಈ ಕಾಯಿದೆಯನ್ನು ಕನ್ನಡದಲ್ಲಿ ಪ್ರಿಂಟ್ ಮಾಡಿ ತರಬೇಕೆಂದು ತಾವು ಆದೇಶ ಮಾಡಿದ್ದೀರಿ, ಅದನ್ನು ಅವರು ಎಲ್ಲರಿಗೂ ಕಳುಹಿಸಿದ್ದಾರೆ, ಇದೇ ರೀತಿ ಎಲ್ಲರೂ ಕನ್ನಡದಲ್ಲಿ ಕಳುಹಿಸಿದರೆ ಅನುಕೂಲವಾಗುತ್ತದೆ, ನಾವು ಎಲ್ಲವನ್ನೂ ಗ್ರಂಥಾಲಯಕ್ಕೆ ಹೋಗಿ ನೋಡಿಕೊಂಡು ಬರಲಾಗುವುದಿಲ್ಲ, ದಯವಿಟ್ಟು ಎಲ್ಲಾ ಮಂತ್ರಿಗಳು ಈ ರೀತಿ ಮಾಡುವಂತೆ ತಾವು ಆದೇಶ ಮಾಡಬೇಕು.

ಅಧ್ಯಕ್ಷರು :- ಅವರು ಒಳ್ಳೆಯ ಕೆಲಸ ಮಾಡಿದ್ದಾರೆ, ಎಲ್ಲಾ ಮಂತ್ರಿಗಳಿಗೂ ನಾನು ಬರೆಯುವ ಕೆಲಸವನ್ನು ಮಾಡುತ್ತೇನೆ, ಅವರು ಕನ್ನಡದಲ್ಲಿ ಪ್ರಿಂಟ್ ಮಾಡಿಸುವುದು ಬಿಡುವುದು ಅವರ ಕರ್ತವ್ಯ, ಆದರೆ ನಾನು ಬರೆಯುವುದನ್ನು ಬರೆಯುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :- ನಾನು ಬರೆಯುವ ಕೆಲಸ ಮಾಡುತ್ತೇನೆ, ಅವರು ಮಾಡಿದರೆ ಮಾಡಲಿ ಎಂದು ಹೇಳಿದರೆ ಹೇಗೆ? ಸರ್ಕಾರ ತಾವು ಹೇಳಿದಂತೆ ಕೇಳಬೇಕಾಗುತ್ತದೆ, ಆ ಪೀಠಕ್ಕೆ ಸರ್ವೋಚ್ಚ ಅಧಿಕಾರವಿದೆ.

ಅಧ್ಯಕ್ಷರು :- ಒಪ್ಪಿಕೊಂಡೆ, ಆದರೆ ನಾನು ಡಿಕ್ಟೇಟ್ ಮಾಡಲು ಸಾಧ್ಯವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :- ತಾವು ಡಿಕ್ಟೇಟ್ ಮಾಡಬೇಕಾಗುತ್ತದೆ, ತಾವು ಆ ರೀತಿ ಹೇಳಿದರೆ ನಮಗೆ ಯಾರು ದಿಕ್ಕು.

ಶ್ರೀ ಎ. ಲಕ್ಷ್ಮೀನಾರಾಯಣ :- ಮಾನ್ಯ ಸಭಾಧ್ಯಕ್ಷರೆ, ಸರ್ಕಾರಕ್ಕೆ ತಾವು ಆದೇಶ ಮಾಡಬೇಕು, ಏಕೆಂದರೆ ವಿರೋಧ ಪಕ್ಷದವರನ್ನೂ ಕೂಡ ಸಮಾನವಾಗಿ ನೋಡಿಕೊಂಡು ಅವರಿಗೆ ತಾವು ಆದೇಶ ಮಾಡಬೇಕಾಗುತ್ತದೆ.

ಅಧ್ಯಕ್ಷರು :- ನಾನು ಬರೆಯುತ್ತೇನೆ, ಕೆಲವು ಸದಸ್ಯರು ಹೇಳುವಂತೆ ಶಾಕ್ ಟ್ರೀಟ್‌ಮೆಂಟ್ ಕೊಡಲು ಅವಕಾಶ ಯಾವ ರೂಲ್‌ನಲ್ಲಿದೆ?

ಶ್ರೀ ಎ. ಲಕ್ಷ್ಮೀನಾರಾಯಣ :- ನಾವು ವಿರೋಧ ಪಕ್ಷದವರು ತಮ್ಮ ಮೊರೆ ಹೋಗಬೇಕಾಗುತ್ತದೆ.

ಅಧ್ಯಕ್ಷರು :- ಅವರಿಗೆ ಸಾಧ್ಯವಾದಷ್ಟು ಕಂಪಲ್‌ಸರಿಯಾಗಿ ಕನ್ನಡದಲ್ಲಿ ಪ್ರಿಂಟ್ ಮಾಡಿಸಿ ಎಂದು ಹೇಳುತ್ತೇನೆ. ಈಗ ಸಭೆಯ ಮುಂದಿಡಲಾಗುವ ಕಾಗದಪತ್ರಗಳನ್ನು ತೆಗೆದುಕೊಳ್ಳೋಣ.

2. ಸಭೆಯ ಮಂದಿಡಲಾದ ಕಾಗದ ಪತ್ರಗಳು

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :- (ಮಾನ್ಯ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಗಳು ಇವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೆಯ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2001ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಜಿಲ್ಲಾಪಂಚಾಯತ್ ವರದಿಯನ್ನು ಸಭೆಯ ಮುಂಡಿಡುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

3. ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ ; ಕಾರ್ಯದರ್ಶಿ ವಿಧಾನಸಭೆ: - ಸನ್ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

1. ಕರ್ನಾಟಕ ನಗರ ನೀರು ಪೂರೈಕೆ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ, 2003 ಅನುಬಂಧ I, II

2. ಕರ್ನಾಟಕ ಗ್ರಾಮ ಹುದ್ದೆಗಳ ರಿದ್ದಿಯಾತಿ (ತಿದ್ದುಪಡಿ) ವಿಧೇಯಕ 2003,

ಅಧ್ಯಕ್ಷರು :- ವರದಿಯನ್ನು ಒಪ್ಪಿಸಲಾಯಿತು.